ನಂತರ ಯಾದವಗಿರಿಯಲ್ಲಿ ಮನೆ ಮಾಡಿದ್ದರು. ಮೂರ್ತಿ ನಜರ್‌ಬಾದ್‌ನಲ್ಲಿ ಮನೆ ಮಾಡಿದಾಗ, ಇನ್ನು ಮುಂದೆ ಕಾಯಂ ಆಗಿ ಮೈಸೂರಲ್ಲಿಯೇ ನೆಲೆಸಲು ನಿರ್ಧರಿಸಿದರು. ಮೂರ್ತಿ ಎಲ್ಲಿಯೇ ಇರಲಿ, ಗೋಪಾಲಗೌಡರು ಅವರ ಮನೆಗೇ ಬಂದು ಉಳಿಯುತ್ತಿದ್ದರು. ಮೂರ್ತಿಯ ಮನೆ ಸಮಾಜವಾದಿ ಪಕ್ಷದ ಮೈಸೂರು ಕಾರ್ಯಾಲಯವೇ ಆಗಿರುತ್ತಿತ್ತು. ವಿಷ್ಣುಮೂರ್ತಿ ಕೆಲ ಕಾಲದ ನಂತರ ಸ್ವಂತದ ಆಸ್ಪತ್ರೆ ಮಾಡಿಕೊಂಡರು. ಆರಂಭದಲ್ಲಿ ಇದ್ದ ಮಿನಿ ಆಸ್ಪತ್ರೆ ಮುಂದೆ ನಜರ್‌ಬಾದ್ ಪೊಲೀಸ್ ಸ್ಟೇಷನ್ ಎದುರಿನ ವಿಶಾಲ ಪ್ರಾಂಗಣದಲ್ಲಿ 'ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ' (ಜಿಜಿಎಸ್ ಮೆಮೋರಿಯಲ್ ಹಾಸ್ಪಿಟಲ್) ಎಂದೇ ಹೆಸರಾಯಿತು. ಆಡಳಿತದ ಸಂಪೂರ್ಣ ಹೊಣೆಯನ್ನು ರೇಖಕ್ಕ ನಿಭಾಯಿಸತೊಡಗಿದ್ದರು. ಮೂರ್ತಿ ಮತ್ತು ರೇಖಕ್ಕ ಇಬ್ಬರೂ ಆಸ್ಪತ್ರೆಯಲ್ಲಿಯೂ ಗೋಪಾಲಗೌಡರ ಜನತಾ ಸೇವೆಗಾಗಿ ಒಂದು ಪಾಲು ಇಟ್ಟುಕೊಂಡು ನಿರ್ವಹಿಸಿದರು. ಅವರು ಗೋಪಾಲಗೌಡರನ್ನು ಎಂದೂ ಮರೆಯಲಿಲ್ಲ, ಬಿಟ್ಟುಕೊಡಲಿಲ್ಲ. ಮುಖ್ಯ ಪ್ರವೇಶ ದ್ವಾರದಲ್ಲಿ ಶಾಂತವೇರಿ ಗೋಪಾಲಗೌಡರು ಮತ್ತು ರಾಮಮನೋಹರ್ ಲೋಹಿಯಾ ಅವರು ಕುಳಿತು ಮಾತಾಡುತ್ತಿದ್ದ ಒಂದು ಬೃಹತ್ ಭಾವಚಿತ್ರವನ್ನು ಹಾಕಿದ್ದಾರೆ. ತಮ್ಮ ಹಾಗೂ ಅಸಂಖ್ಯ ಬಡವರ ಬದುಕನ್ನು ಕಟ್ಟಿ ಕೊಟ್ಟ ಗೋಪಾಲಗೌಡರನ್ನು ಸ್ಮರಿಸುವ ಇಂಥ ಪ್ರಯತ್ನ ಬೇರೆ ಕಡೆ ನಡೆದಿಲ್ಲ ಎಂದೇ ಅನಿಸುತ್ತದೆ. ಈಗಂತೂ ಮೈಸೂರು ಮತ್ತು ಶಿವಮೊಗ್ಗದ ಎಲ್ಲ ಭಾಗದ ಜನರಿಗೆ ಬೇಕಾದ ಆಸ್ಪತ್ರೆಯಾಗಿ ಗೋಪಾಲಗೌಡರ ಹೆಸರು ಅಮರವಾಗಿ ಉಳಿಯುವಂತೆ ಮಾಡಲಾಗಿದೆ.

***

ಗೋಪಾಲಗೌಡರ ಜೊತೆಗಿನ 15–20 ವರ್ಷಗಳ ಒಡನಾಟದಲ್ಲಿ ಡಾ. ವಿಷ್ಣುಮೂರ್ತಿ ಗೌಡರ ಪ್ರೀತಿಯ ವೈದ್ಯರಾಗಿದ್ದರು. ಎಷ್ಟೋ ಸಲ ಗೌಡರ ಬೆಂಗಳೂರಿನ ಮನೆಗೂ ಹೋಗಿ ಚಿಕಿತ್ಸೆ ನೀಡಿ ಬರುತ್ತಿದ್ದರು. ಮನೆಯಲ್ಲಿದ್ದ ಮಗಳು ಇಳಾಗೀತಾ ಮತ್ತು ರಾಮು (ರಾಮಮನೋಹರ್), ವಿಷ್ಣುಮೂರ್ತಿ ಅಂಕಲ್‌ಗಾಗಿ ಕಾಯುತ್ತಿದ್ದರು. ಸೋನಕ್ಕ ಮೈಸೂರಿಗೆ ಬಂದಾಗ, ವಿಷ್ಣುಮೂರ್ತಿಯವರ ಮನೆಯಲ್ಲಿಯೇ ಉಳಿಯುತ್ತಿದ್ದರು.

***

ಬೆಂಗಳೂರಿನ ಮೆಜೆಸ್ಟಿಕ್‌ನಲ್ಲಿ ಅಣ್ಣಮ್ಮ ದೇವಸ್ಥಾನದ ಎದುರಿನ ಕಟ್ಟಡದ ಅಟ್ಟದ ಮೇಲೆ ಗೌಡರ ಸಮಾಜವಾದಿ ಪಕ್ಷದ ಕಚೇರಿ. ಪಕ್ಕದಲ್ಲಿಯೇ ಎಸ್‌ಆರ್‌ಎಸ್ ಬಸ್ ಕಚೇರಿ. ಬಾಪು ಹೆದ್ದೂರಶೆಟ್ಟಿ, ಬಾಬುರೆಡ್ಡಿ ತುಂಗಳ ಮುಂತಾದ ಗೌಡರ ಸಮಾಜವಾದಿ ಶಿಷ್ಯರನ್ನು ಮೊದಲು ಕಂಡದ್ದು ಅಲ್ಲಿಯೇ. ನಾನು, ಮೂರ್ತಿ ಹೋದಾಗಲೆಲ್ಲ ಅದರ ಪಕ್ಕದ ಹೋಟಲಿನಲ್ಲಿಯೇ ಉಳಿಯುತ್ತಿದ್ದೆವು. ಬಹಳ ಸಲ ಗೌಡರು ಹತ್ತಿರದ ಸರ್ಕಲ್ ಬದಿಗಿದ್ದ ಅನ್ವರಿ ಹೋಟಲಿನಲ್ಲಿ ತಮ್ಮ ಜೊತೆಗೆ ಊಟಕ್ಕೆ ಕರೆದುಕೊಂಡು ಹೋಗುತ್ತಿದ್ದರು.

ವೀರೇಂದ್ರ ಪಾಟೀಲರ ಆಡಳಿತ ಕಳೆದು, ರಾಜ್ಯಪಾಲ ಧರ್ಮವೀರರ ಹೆಗಲಿಗೆ ಬಂದಾಗ, ಇಡೀ ನಾಡಿನ ಆಶೆಗಣ್ಣು ಗೋಪಾಲಗೌಡರ ಮೇಲೆ ನೆಟ್ಟಿತ್ತು. ಆದರೆ ದುರದೃಷ್ಟ. ಜನರ ಕನಸು ನನಸಾಗಲಿಲ್ಲ. ಕೊನೆಗಾಲದಲ್ಲಿ ಹೆಚ್ಚಿದ ಮಧುಮೇಹ, ನಂತರ ಅರ್ಧಾಂಗವಾಯುವಿನಿಂದ ಬಳಲಿದ್ದ ಗೌಡರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು (1971ರ ನವಂಬರ್ 26). ಗೌಡರು ತಮ್ಮ ಕಡೆಯ ದಿನಗಳನ್ನು ಅರೆಪ್ರಜ್ಞಾವಸ್ಥೆಯಲ್ಲಿಯೇ ಕಳೆದರು. ಆ ಹೊತ್ತಿನಲ್ಲಿಯೂ ತಮ್ಮ ಸಾಮಾಜಿಕ ಬದ್ಧತೆಯ ಕಾಳಜಿಯನ್ನು ಬಡಬಡಿಸುತ್ತಲೇ ಇದ್ದರು. ಒಮ್ಮೆ ಡಾ. ವಿಷ್ಣುಮೂರ್ತಿಯವರ ಜೊತೆ ಗೌಡರನ್ನು ನೋಡಲು ಆಸ್ಪತ್ರೆಗೆ ಹೋಗಿದ್ದೆ. ಅ.ಮ. ಖಾನ್, ಅಬ್ದುಲ್ ನಜೀರ್‌ಸಾಬ್ ನಮ್ಮ ಜೊತೆಗಿದ್ದರು. ತುರ್ತು ನಿಗಾ ಘಟಕದಲ್ಲಿದ್ದ (ಐಸಿಯು) ಗೌಡರು ಬಹಳ ನಿತ್ರಾಣಗೊಂಡಿದ್ದರು. ಅಂಥ ಸ್ಥಿತಿಯಲ್ಲಿಯೂ ನಮ್ಮನ್ನು ಗುರುತಿಸಲು, ನೆನಪಿಸಿಕೊಳ್ಳಲು ಯತ್ನಿಸಿದರು. ಸೋನಕ್ಕನ ಅಸಹಾಯಕ ಸ್ಥಿತಿಯನ್ನು ಕಂಡು ನಾವೆಲ್ಲರೂ ಮೂಕರಾಗಿದ್ದೆವು. 1952, 1962, 1967 – ಹೀಗೆ ಮೂರು ಸಲ ಶಾಸಕರಾಗಿ ಆರಿಸಿ ಬಂದು, ತಾವು ಕಟ್ಟಿದ ಸಮಾಜವಾದಿ ಪಕ್ಷದಿಂದ ಲೋಹಿಯಾ ಧ್ವಜವನ್ನು ಕರ್ನಾಟಕದಲ್ಲಿ